



ಬೇವಿನ ಗಿಡದ ಕಟ್ಟಿಮ್ಯಾಲ ಹುಲಿಹರಳು ಆಟ ಭಾರಿ ತುರುಸಿಲೆ ನಡೆದಿತ್ತು. ಪೀರಾ ಹುಲಿಯಾಗಿ, ಭದ್ರು ಹರಳಾಗಿ ಆಡುತ್ತಿದ್ದರು. ಅವರಾಡತಾರಂದ್ರೆ ಆ ಆಟದ ಖದರ್ರೆ ಬೇರೆ. ಪೀರಾನ ಹುಲಿ ಒಂದು ಮನೆ ಸರೀತು ಅಂದ್ರ ಒಂಬತ್ತು ದಾರಿ ಕಾಣತಾವು. ಭದ್ರೂನರೆ ಏನು ಕಡಿಮೆ ಅಂತೀರಿ! ಧೇನಿಸಿ ಧೇನಿಸಿ ಒಂದು ಹರಳು ಸರಿಸಿದಂದ್ರ ಒಂಬತ್ತೂ ದಾರಿ ಬಂದ ಆಗಿ ಹುಲಿ ವಿಲಿವಿಲಿ ಒದ್ದ್ಯಾಡತ್ತೈತಿ. ಅಂಥ ಜಾಬಾದಿ ಆಟಗಾರರು ಅವರಿಬ್ಬರು. ಅವರು ಆಡಾಕ ಸುರು ಮಾಡಿದ್ರ ಕಟ್ಟಿ ಸುತ್ತು ನಿಂತು ನೂರು ಜನರು ನೋಡತಾರು. ಈ ಹೊತ್ತೂ ಅಲ್ಲಿ ನೂರು ಜನ ಸೇರಿದ್ದರು.

ಆಗ ಬೈಲಹೊಂಗಲ ಟಪಾಲು ಗಾಡಿಲಿಂದ ಇಳಿದು ಬಂದವನೊಬ್ಬ–

"ಇಲ್ಲಿ ದಾನಗೌಡರ ದಾನಮ್ಮಾರ ಮನಿ ಎಲ್ಲಿ ಐತ್ರಿ" ಎಂದು ಕೇಳಿದ.

"ದಾನಗೌಡರ ದಾನಮ್ಮನ ಮನಿ!? ಆ ಹೆಸರಿನವರು ನಮ್ಮೂರಾಗ ಯಾರೂ ಇಲ್ಲ" ಎಂದ ಅಲ್ಲೆ ನಿಂತಿದ್ದ ನಿಂಗ್ರಾಜ.

"ಮತ್ತ ನಮ್ಮ ಸಾಹುಕಾರ್ರು ಇಲ್ಲಿಗೆ ಹೋಗಿ ಅವರನ್ನು ಕರಕೊಂಬರಾಕ ಕಳಿಸ್ಯಾರು."

"ಯಾಕಂತ?"

"ಅದೇನು ಕೇಳತೀರಿ, ಇನನೌನ ಈ ಮಳೆ ಕಾಲಾಗ ಸಾಕ ಸಾಕಾಗೇದ. ಇದು ಮಾಡೂ ಅನಾಹುತ ಒಂದೊ ಎರಡೊ, ನಮ್ಮ ಸಾಹುಕಾರ ಮಗಾ ಮತ್ತು ಸೊಸಿ ಬುಲ್ಲೆಟ್ಟು ಗಾಡಿ ಕಿಡ್ಡಾಗಿ ಹಾಕ್ಕೊಂಡು ಬಿದ್ದು ಸಾಹುಕಾರ್ತಿ ಸೊಂಟಕ್ಕ ಪೆಟ್ಟಾಗಿ ಏಳಾಕ ಬರವಲ್ಲದು. ದಾನಮ್ಮಾರು ತಿಕ್ಕಿ ಕಟ್ಟು ಕಟ್ಟತಾರಂತಲ್ಲರಿ. ಅವರನ್ನು ಕರಕೊಂಡು ಹೋಗಾಕ ಬಂದೇನ್ರಿ."

''ಏನ ಮಳ್ಳ ಅದಿನೊ ಮಾರಾಯ ನೀ! ಆಕಿ ದಾನಗೌಡರ ದಾನಮ್ಮಲ್ಲ, ದಾಡಿ ದಾನಮ್ಮತ್ತಿ. ಬಾ ಆಕಿ ಮನಿ ತೋರಸತೇನಿ."

ಬಸ್‌ಸ್ಟ್ಯಾಂಡಿನಿಂದ ಪ್ಯಾಟಿ ರಸ್ತಾಗುಂಟ ಹೋಗಿ ಬಲಕ ತಿರುಗಿ ಮಠದ ಓಣಿಯಲ್ಲಿರುವ ಅವರ ಮನಿಗೆ ಹೋಗಿ ''ದಾಣಮ್ಮತ್ತ್ಯಿ, ದಾನಮ್ಮತ್ತ್ಯಿ'' ಎಂದು ಕೂಗುತ್ತ ಒಳಗೆ ನಡೆದ.

ಶಾಬಾದಿ ಪರಸಿ ಮೇಲೆ ಎಂಥದೊ ಹಸಿರು ತಪ್ಪಲು ಅರೆಯುತ್ತಿದ್ದವಳು ತಲೆ ಎತ್ತಿ, "ಬಾರೊ